**ಅ. ದಾ. ಸಂ. : 194 / 2012**
**ಪಿ.ಡಬ್ಲ್ಯೂ : 02**

**ದಿನಾಂಕ : 20-08-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಪ್ರತಿವಾದಿಯ ಪರ ಶ್ರೀ. ಎ.ಎಸ್.ಎಸ್. ವಕೀಲರಿಂದ :-**

ಏನು ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿ ಬಿ.ಎ ಪದವೀದರ ಎಂದು ನುಡಿಯುತ್ತಾರೆ. ಏನು ಕೆಲಸ ಮಾಡುತ್ತೀರಿ ಎಂದರೆ ಸಾಕ್ಷಿ ವ್ಯವಸಾಯ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಯಾವಾಗ ಮರಣ ಹೊಂದಿರುತ್ತಾರೆಂದರೆ ಸಾಕ್ಷಿ 1 ವರ್ಷ 4 ತಿಂಗಳು ಆಗಿರುತ್ತದೆಂದು ನುಡಿಯುತ್ತಾರೆ. ನಿಮ್ಮ ತಂದೆ ಜೀವಂತವಿರುವವರೆವಿಗೂ ಪತ್ರ ಬರಹಗಾರರಾಗಿ ಕೆಲಸ ಮಾಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಪತ್ರ ಬರಹಗಾರರಾಗಿ ಯಾವಾಗ ನೊಂದಣಿ ಮಾಡಿಸಿಕೊಂಡಿದ್ದರು ಎಂದರೆ ಸಾಕ್ಷಿ 40 ವರ್ಷಗಳಿಂದ ಪತ್ರ ಬರೆದಿರುತ್ತಾರೆಂದು ನುಡಿಯುತ್ತಾರೆ.

2. ಸಾಕ್ಷಿ ಹೇಳಲು ಯಾರು ಕರೆದಿರುತ್ತಾರೆಂದರೆ ಸಾಕ್ಷಿ ಅನಂತ್ ಎಂಬುವರು ಎಂದು ನುಡಿಯುತ್ತಾರೆ. ನಿಪಿ-1 ರ ಪತ್ರವನ್ನು ನಿಮ್ಮ ತಂದೆಯವರು ಬರೆದಿರುವುದಿಲ್ಲ ಎಂದರೆ ಸಾಕ್ಷಿ ಹೌದು, ಸಾಕ್ಷಿಯಾಗಿ ಮಾತ್ರ ಸಹಿ ಮಾಡಿರುತ್ತಾರೆಂದು ನುಡಿಯುತ್ತಾರೆ. 1994 ನೇ ಇಸವಿಯಲ್ಲಿ ನಿಮ್ಮ ತಂದೆಯವರು ಪತ್ರಬರಹಗಾರರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಪಿ-22 ರ ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ನಿಮ್ಮ ಕುಟುಂಬಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾವ ರೀತಿ ಸದರಿ ನಿಪಿ-22 ರ ದಾಖಲಾತಿ ಸಿಕ್ಕಿರುತ್ತದೆಂದರೆ ಸಾಕ್ಷಿ ಮನೆಯಲಿ ಹುಡುಕಿದಾಗ ಸಿಕ್ಕಿರುತ್ತದೆಂದು ನುಡಿಯುತ್ತಾರೆ. ಸದರಿ ನಿಪಿ-22 ರ ಪತ್ರದ ಪಕ್ಷಗಾರರು

ಜೀವಂತವಿರುತ್ತಾರೆಯೇ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

3. ನಿಪಿ-1(ಎ) ರಲ್ಲಿ ಪಟೇಲ್ ಕೆ.ಎಂ. ಮಾದಯ್ಯ ಕಲ್ಲುದೇವನಹಳ್ಳಿ ಎಂದು ಇದ್ದು, ನಿಪಿ-22(ಎ) ರಲ್ಲಿ ಕಲ್ಲುದೇವನಹಳ್ಳಿ ಪಟೇಲ್ ಕೆ.ಎಂ. ಮಾದಯ್ಯ ಎಂದು ಇದೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಹಾಗೂ ನಿಪಿ-22 ರಲ್ಲಿ ಇರುವ ನಿಮ್ಮ ತಂದೆಯವರ ಸಹಿಗಳು ವ್ಯತ್ಯಾಸ ಇದೆ ಎಂದರೆ ಸಾಕ್ಷಿ ವ್ಯತ್ಯಾಸ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1(ಎ) ಸಹಿಯು ನಿಮ್ಮ ತಂದೆಯವರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆಯವರ ಸಹಿ ಇರುತ್ತದೆಂದು ನುಡಿಯುತ್ತಾರೆ. ಸದರಿ ನಿಪಿ-1 ಕ್ಕೆ ನೀವೆ ಸಹಿ ಮಾಡಿ, ಬೇರೆ ದಾಖಲೆಯನ್ನು ಹಾಜರು ಪಡಿಸಿ ಸದರಿ ನಿಪಿ-1 ರಲ್ಲಿರುವ ಸಹಿ ನಿಮ್ಮ ತಂದೆಯವರದ್ದೇ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-1 ರಲ್ಲಿರುವ ಸಹಿ ನಿಮ್ಮ ತಂದೆಯವರ ಸಹಿ ಇರುವುದಿಲ್ಲ, ಅನಂತ್ ರವರ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

4. ನಿಮ್ಮ ತಂದೆಯವರು ಪತ್ರಬರಹಗಾರರಾಗಿ ಕಚೇರಿ ಮಾಡಿಕೊಂಡಿದ್ದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಪತ್ರಗಳನ್ನು ಬರೆದ ಬಗ್ಗೆ ನೊಂದಣಿ ಪುಸ್ತಕ ಇಟ್ಟಿದ್ದರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸುಳ್ಳು ಮುಖ್ಯ ವಿಚಾರಣೆ ಪ್ರಮಾಣಪತ್ರಿಕೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

**ಅ. ದಾ. ಸಂ. ಃ 194 / 2012**
**ಪಿ.ಡಬ್ಲ್ಯೂ ಃ 02**

**ಮರು ವಿಚಾರಣೆ ಃ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.**

**ಅ. ದಾ. ಸಂ. : 194 / 2012**
**ಪಿ.ಡಬ್ಲ್ಯೂ : 03**

**ದಿನಾಂಕ : 20-08-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಪ್ರತಿವಾದಿಯ ಪರ ಶ್ರೀ. ಎ.ಎಸ್.ಎಸ್. ವಕೀಲರಿಂದ :-**

ಏನು ಕೆಲಸ ಮಾಡುತ್ತೀರಿ ಎಂದರೆ ಸಾಕ್ಷಿ ವ್ಯವಸಾಯ ಎಂದು ನುಡಿಯುತ್ತಾರೆ. ವಾದಿ ನಿಮಗೆ ಸಂಬಂಧಿಕರ ಎಂದರೆ ಸಾಕ್ಷಿ ಇಲ್ಲ, ನಮ್ಮ ಊರಿನವರು ಎಂದು ನುಡಿಯುತ್ತಾರೆ. ನಿಮ್ಮ ತಾಯಿಯ ತಂದೆ ಹೆಸರು ಏನು ಎಂದರೆ ಸಾಕ್ಷಿ ಪುಟ್ಟಯ್ಯ ಎಂದು ನುಡಿಯುತ್ತಾರೆ. ವಾದಿಯ ತಾಯಿ ಹಾಗೂ ತಂದೆ ಹೆಸರು ಗೊತ್ತೆ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ವಾದಿಯ ತಾಯಿಹಾಗೂ ತಂದೆ ಮತ್ತು ನಿಮ್ಮ ತಾಯಿ ಹಾಗೂ ತಂದೆಯವರು ಅಣ್ಣತಮ್ಮಂದಿರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂ.39/6 ರ ಆಸ್ತಿಯನ್ನು ಯಾವಾಗ ಕರೀದಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 39/2 ರ ಪಹಣಿಯನ್ನು ನೋಡಿರುತ್ತೀರಾ ಎಂದರೆ ಸಾಕ್ಷಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಯಾರ ಹೆಸರಿನಲ್ಲಿ ಪಹಣಿ ಇದೆ ಎಂದರೆ ಸಾಕ್ಷಿ ನರಸಮ್ಮ ರವರ ಹೆಸರಿನಲ್ಲಿ ಎಂದು ನುಡಿಯುತ್ತಾರೆ. ಯಾವಾಗ ಸದರಿ ಪಹಣಿಯನ್ನು ನೋಡಿರುತ್ತೀರಿ ಎಂದರೆ ಸಾಕ್ಷಿ ಸರ್ವೆ ನಂ .39/6 ರ ನೋಂದಣಿಗೆ ಹೋದಾಗ ಸರ್ವೆ ನಂ.39/2 ನರಸಮ್ಮರವರ ಹೆಸರಿಗೆ ಇದ್ದ ಬಗ್ಗೆ ಪಹಣಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಪಿ-10 ರ ಸರ್ವೆ ನಂ.39/2 ರ ಪಹಣಿಯನ್ನು ತೋರಿಸಲಾಗಿ ಸದರಿ ಪಹಣಿಯಲ್ಲಿ ಯಾರ ಹೆಸರು ಇದೆ ಎಂದರೆ ಸಾಕ್ಷಿ ಗಿರಿಮಲ್ಲಯ್ಯ ಎಂದು ನುಡಿಯುತ್ತಾರೆ. ವಾದಿಯು ಸರ್ವೆ ನಂ.39/2 ರ ಜಮೀನಿನ ಮಾಲೀಕರು ಎಂದು ನೀವು ಯಾವ ದಾಖಲೆಯನ್ನು ನೋಡಿರುತ್ತೀರಿ

ಎಂದರೆ ಸಾಕ್ಷಿ ದಾಖಲೆ ಗೊತ್ತಿರುವುದಿಲ್ಲ ಆದರೆ ಅವರು ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ 39/2 ರ ಜಮೀನಿನ ಎಷ್ಟು ದೂರದಲ್ಲಿ ಸರ್ವೆ ನಂ .39/6 ಇದೆ ಎಂದರೆ ಸಾಕ್ಷಿ ಅಕ್ಕಪಕ್ಕದಲ್ಲೆ ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ.39 ಯಾವಾಗ ಪೋಡಿ ಆಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.39/2 ಯಾರ ಹೆಸರಿಗೆ ಪೋಡಿ ಆಗಿದೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ ವಾದಿ ಸ್ವಾಧೀನ ಇದ್ದಾರೆ ಎಂದು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ 24 ವರ್ಷಗಳಿಂದ ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ವಾದಿಗೂ ಮತ್ತು ಸರ್ವೆ ನಂ .39/2 ಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ನೀವು ಅವರ ಸಂಬಂಧಿಕರಾದ ಕಾರಣ ಹಾಗೂ ಅನಂತರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.39/2 ರಲ್ಲಿ ವಾದಿ ಎಂದಿಗೂ ಸ್ವಾಧೀನ ಇರುವುದಿಲ್ಲ ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸಾಕ್ಷಿ ಪ್ರತಿವಾದಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಬಗ್ಗೆ ನಿಮಗೆ ಯಾವುದೇ ಮಾಹಿತಿ ಗೊತ್ತಿರುವುದಿಲ್ಲ ಸುಳ್ಳು ಮುಖ್ಯ ವಿಚಾರಣೆ ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ಮಾಹಿತಿ ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಾನೆ ಎಂದು ನುಡಿಯುತ್ತಾರೆ. ಯಾವ ದಾಖಲೆಗಳ ಆಧಾರದ ಮೇಲೆ ವಾದಿಯು ಸರ್ವೆ ನಂ.39/2 ರ 12 ಗುಂಟೆ ಜಮೀನಿನಲ್ಲಿ ಸ್ವಾಧೀನ ಇದ್ದಾರೆ ಎಂದು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಅವರು ಉಳುಮೆ ಮಾಡುತ್ತಿರುವುದರಿಂದ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ.

ಅ. ದಾ. ಸಂ. : **194 / 2012**
ಪಿ.ಡಬ್ಲ್ಯೂ : **03**

ನರಸಮ್ಮ ಮರಣ ಹೊಂದಿದ ನಂತರ ಅವರ ವಾರಸುದಾರರು ಸರ್ವೆ ನಂ.39/2 ರಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದು ಅವರು ಸ್ವಾಧೀನ ಇರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆ ಕಾರಣದಿಂದಲೇ ಸರ್ವೆ ನಂ.39 ಹಾಗೂ 39/2 ರ ದಾಖಲೆಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ : ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.**